**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 348/2024**

**ಫಿರ್ಯಾದುದಾರರು** ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೊ-ಆಪರೇಟಿವ್ ಲಿ.
ಕಾರವಾರ, ಭಟ್ಕಳ ಶಾಖೆ ಇದರ ಪರವಾಗಿ ಪ್ರತಿನಿಧಿಸುವವರು
ಸಾಲ ವಿಭಾಗ ಅಧಿಕಾರಿ,
ಶ್ರೀ ಕಿರ್ತಿರಾಜ ಪಿ. ಶಿರಾಲಿ

**- ವಿರುದ್ಧ -**

**ಆರೋಪಿತರು** ಶ್ರೀಮತಿ ರೇಖಾ ಕೋಂ. ವಿಜಯಾ ಖಾರ್ವಿ
ವಯಸ್ಸುಃ 44 ವರ್ಷ,
ಸಾಃ 168, ಕರಿಕಾಲ, ಪೊಃ ಮಾವಿನಕುರ್ವೆ,
ಭಟ್ಕಳ ತಾಲೂಕ.

**ಆಪಾದನೆ**

ವಿಜಯ ಗೋಪಿನಾಥ ಖಾರ್ವಿ ರವರು ದಿನಾಂಕಃ 07-07-2022 ರಂದು ಪಿರ್ಯಾದಿ ಬ್ಯಾಂಕಿನಲ್ಲಿ ರೂ.55,000/- (ರೂಪಾಯಿ ಐವತ್ತೈದು ಸಾವಿರ ಮಾತ್ರ) ಹಣವನ್ನು ವ್ಯಾಪಾರ ಸಾಲದ ಖಾತೆ ಸಂಖ್ಯೆ(B.L.No.1453)ರಲ್ಲಿ ಸಾಲವಾಗಿ ಪಡೆದು ಶೇಕಡಾ 15% ಬಡ್ಡಿ ಮತ್ತು 3.75% ದಂಡದ ಬಡ್ಡಿಯಂತೆ ಹಿಂತಿರುಗಿಸುವುದಾಗಿ ಒಪ್ಪಿಕೊಂಡಿದ್ದು ಇರುತ್ತದೆ. ಮತ್ತು ಆರೋಪಿತಳಾದ ನೀವು ಜಾಮೀನುದಾರಳಾಗಿರುತ್ತೀರಿ. ಆದರೆ ಮುಖ್ಯ ಸಾಲಗಾರ ಹಾಗೂ ಜಾಮಿನುದಾರಳಾದ ನೀವು ಸಾಲ ಮರುಪಾವತಿಸಲು ವಿಫಲರಾಗಿರುತ್ತೀರಿ. ದಿನಾಂಕಃ 24-11-2023 ರಂದು ನಿಮ್ಮ ಸಾಲದ ಖಾತೆಯಲ್ಲಿ ರೂ.61,201/- ಮೊತ್ತ ಬಾಕಿ ಇರುತ್ತದೆ. ಸ್ದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಕೆನರಾ ಬ್ಯಾಂಕ್, ಭಟ್ಕಳ ಶಾಖೆಯ ಚೆಕ್ ನಂಬರ್ 048024 ನ್ನು ರೂ.61,201/- (ರೂಪಾಯಿ ಆರವತ್ತೊಂದು ಸಾವಿರದಾ ಎರಡು ನೂರಾ ಒಂದು ಮಾತ್ರ)ಕ್ಕೆ ದಿನಾಂಕಃ 24-11-2023 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸ್ದ್ರಿ ಚೆಕ್ಕನ್ನು ಫಿರ್ಯಾದಿದಾರರು ಫೆಡರಲ್ ಬ್ಯಾಂಕ ಲಿ. ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "FUNDS INSUFFICIENT" ಎಂಬ ಹಿಂಬರಹದೊಂದಿಗೆ ದಿನಾಂಕಃ 27-11-2023 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 08-12-2023 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ಕಳುಹಿಸಿದ್ದು, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 16-12-2023 ರಂದು ಜ್ಯಾರಿಯಾಗಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ. ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ - Yes

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – Pleaded not guilty.

(ಮೇಲಿನ ಆಪಾದನೆಯನ್ನು ಆಪಾದಿತಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**Sd/-**

**(ಶ್ರೀಮತಿ. ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 26-07-2024.

ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.